ರಾಜ್ಯದಲ್ಲಿ ದೇವದಾಸಿ ಪದ್ಧತಿಯನ್ನು ನಿರ್ಮೂಲಗೊಳಿಸುವ ಬಗ್ಗೆ

*೧೯೬ ಶ್ರೀ ಆರ್. ಎನ್. ನಾಯಕ್ (ಭಟ್ಕಳ).— ಮಾನ್ಯ ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿ ದೇವದಾಸಿ ಪದ್ಧತಿಯನ್ನು ನಿರ್ಮೂಲಗೊಳಿಸಲು ಕಳೆದ ಮೂರು ವರ್ಷಗಳಿಂದ ಸರ್ಕಾರ ಎಷ್ಟು ಹಣ ಖರ್ಚು ಮಾಡಿದೆ;

ಆ) ಸದ್ಯ ಎಷ್ಟು ಜನ ದೇವದಾಸಿಯರು ರಾಜ್ಯದಲ್ಲಿ ಇದ್ದಾರೆಂದು ಸಮೀಕ್ಷೆ ಮಾಡಲಾಗಿದೆಯೆ;

ಇ) ಇನ್ನೂ ಹೊಸದಾಗಿ ದೇವದಾಸಿಯರನ್ನಾಗಿ ಮಾಡುವ ಪದ್ಧತಿ ಮುಂದುವರಿದಿದೆಯೆ;

ಈ) ಮಕ್ಕಳನ್ನು ದೇವದಾಸಿ ಪದ್ಧತಿಗೆ ಆಳವಡಿಸುವ ತಂದೆ ತಾಯಿಯರನ್ನು ಅಥವಾ ಬೇರೆಯವರನ್ನು ಶಿಕ್ಷೆಗೆ ಗುರಿಪಡಿಸಲು ಕಾನೂನು ಇದೆಯೇ; ಹಾಗಿದ್ದಲ್ಲಿ ಶಿಕ್ಷೆ ಯಾವ ಮಾದರಿಯದು;

ಶ್ರೀ ಎಂ. ವೀರಪ್ಪ ಮೊಯಿಲಿ.—ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ಪ್ರವಾಸೋದ್ಯಮ ಸಚಿವರು (ಸಮಾಜ ಕಲ್ಯಾಣ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳ ಪರವಾಗಿ)

ಅ) ರೂ. ೧೨,೬೭,೨೯೯-೦೦

ಆ) ಹೌದು. ೧೯೮೯-೯೦ ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ೧೩,೪೩೪ ದೇವದಾಸಿಯರಿದ್ದಾರೆ.

ಇ) ಇಲ್ಲ.

ಈ) ಹೌದು. ೧೯೮೪ರ ದೇವದಾಸಿ ಸಮರ್ಪಣ ನಿಷೇಧ ಕಾನೂನು ರೀತ್ಯಾ ಯಾವುದೇ ವ್ಯಕ್ತಿ ದೇವದಾಸಿಯರನ್ನಾಗಿ ಮಾಡಿಸಿದ ಪಕ್ಷದಲ್ಲಿ ಆ ವ್ಯಕ್ತಿಗೆ ೩ ವರ್ಷ ಸೆರೆಮನೆ ವಾಸದ ಜೊತೆಗೆ ೨,೦೦೦-೦೦ ರೂ. ಗಳ ದಂಡ ವಿಧಿಸಲಾಗುವುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೇ, ದಿನಾಂಕ ೨೨-೬-೧೯೯೦ರ ಲಿಖಿತ ಮೂಲಕ ಉತ್ತರಿಸುವ ೧೫ನೇ ಪಟ್ಟಿಯಲ್ಲಿರುವ ೧೭ ಪ್ರಶ್ನೆಗಳ ಪೈಕಿ ಪ್ರಶ್ನೆ ಸಂಖ್ಯೆ ೫೪೩. ೮೯೯, ೨೮೦, ೬೭೯ ಅನ್ನು ಹೊರತು ಪಡಿಸಿ ಇನ್ನು ಉಳಿದ ೧೩ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತೇನೆ.

ವಾಣಿಜ್ಯೋದ್ಯಮಿಗಳಿಂದ ವಾಣಿಜ್ಯ ತೆರಿಗೆ ವಸೂಲಿ ಕುರಿತು

(೯೫೩) ಶ್ರೀ ಎ. ಕೃಷ್ಣಪ್ಪ. (ವತರ್ೂರು).— ಮಾನ್ಯ ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ೧೯೮೯-೯೦ರ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಜನ ವಾಣಿಜ್ಯೋದ್ಯಮಿಗಳು ವಾಣಿಜ್ಯ ತೆರಿಗೆಯನ್ನು ಸಕಾಲದಲ್ಲಿ ಪಾವತಿ ಮಾಡಿದ್ದಾರೆ?

ಆ) ೧೯೮೯-೯೦ರಲ್ಲಿ ವಸೂಲಾದ ವಾಣಿಜ್ಯ ತೆರಿಗೆಯು ಮೊತ್ತವೆಷ್ಟು?

ಇ) ೧೯೮೯-೯೦ರಲ್ಲಿ ವಸೂಲಾಗದಿರುವ ವಾಣಿಜ್ಯ ತೆರಿಗೆಯು ಮೊತ್ತವೆಷ್ಟು; ಸದರಿ ಮೊತ್ತವನ್ನು ವಸೂಲಿ ಮಾಡಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ರಾಜಶೇಖರ ಮೂರ್ತಿ (ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರು)—

ಅ) ಈ ಮಾಹಿತಿಯನ್ನು ವಾಣಿಜ್ಯ ತೆರಿಗೆ ಇಲಾಖೆಯ ಅಧೀನ ಕಾರ್ಯಾಲಯಗಳಿಂದ ಪಡೆಯಬೇಕಾಗಿರುವುದರಿಂದ ತಕ್ಷಣದಲ್ಲಿ ಲಭ್ಯವಿರುವುದಿಲ್ಲ.

ಆ) ರೂ. ೧,೨೪೦.೨೩ ಕೋಟಿಗಳು.

ಇ) ರೂ. ೨೨೫.೪೬ ಕೋಟಿಗಳು, ೩೧-೧೨-೧೯೯೦ರ ವರೆಗೆ. ನಿಯಮಾವಳಿಗಳನ್ವಯ ಕ್ರಮಗಳನ್ನು ಕೈಗೊಳ್ಳಲಾಗಿದೆ.